Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 2-08-2022

**ಪತ್ರಿಕಾ ಪ್ರಕಟಣೆ:**

## ಸಿ.ಇ.ಟಿ ನಂತರ ಮುಂದೇನು? ಆಕಾಶವಾಣಿ ಬಾನುಲಿ ನೇರ ಫೋನ್ ಇನ್ ಕಾರ್ಯಕ್ರಮ

ಸಿ.ಇ.ಟಿ. ಪರೀಕ್ಷೆ ನಂತರ ವಿದ್ಯಾರ್ಥಿಗಳಲ್ಲಿನ ಕೋರ್ಸ್ ಆಯ್ಕೆ ಗೊಂದಲ ದೂರಮಾಡುವ ನಿಟ್ಟಿನಲ್ಲಿ ಕೆ. ಎಲ್. ಎಸ್. ಸಂಸ್ಥೆಯ ವಿಶ್ವನಾಥ್ ರಾವ್ ದೇಶಪಾಂಡೆ ಮಹಾವಿದ್ಯಾಲಯ ಹಳಿಯಾಳವು "ಸಿ.ಇ.ಟಿ. ನಂತರ ಮುಂದೇನು " ಎಂಬ ಬಾನುಲಿ ನೇರ ಫೋನ್ ಇನ್ ಕಾರ್ಯಕ್ರಮವನ್ನು ಇದೇ ಆಗಸ್ಟ್ 5 ರ ರಾತ್ರಿ 9.00 ರಿಂದ 10.00ರ ವರೆಗೆ ಆಯೋಜಿಸಿದೆ. ಸಿ.ಇ.ಟಿ. ಪರೀಕ್ಷಾ ಫಲಿತಾಂಶ ಪ್ರಕಟವಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಕೋರ್ಸ್ ಆಯ್ಕೆ ಗೊಂದಲವನ್ನು ನಿವಾರಿಸಲು ಹಾಗೂ ಸೀಟು ಆಯ್ಕೆ ಪ್ರಕ್ರಿಯೆಯ ಸಂಪೂರ್ಣ ವಿವರವನ್ನು ನೀಡಲು ಮಹಾವಿದ್ಯಾಲಯವು ಆಕಾಶವಾಣಿ ಧಾರವಾಡದ ಸಂಯೋಗದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಂದೇಹವನ್ನು ಪರಿಹರಿಸಲು ವಿಷಯ ತಜ್ಞರಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಉತ್ತರ ಕನ್ನಡ ಜಿಲ್ಲಾ ವಿಭಾಗದ ನೋಡಲ್ ಅಧಿಕಾರಿಗಳಾದ ಡಾ.ಭಾಲಚಂದ್ರ ಭಟ್ ಪಾಲ್ಗೊಳ್ಳಲಿದ್ದಾರೆ. ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ.ವಿನಾಯಕ ಲೋಕೂರ್, ಪ್ರಾಂಶುಪಾಲರಾದ ಡಾ.ವಿ.ಎ. ಕುಲಕರ್ಣಿ, ಪ್ರವೇಶ ವಿಭಾಗದ ಸಂಚಾಲಕರಾದ ಪ್ರೊ.ಸುಧೀರ್ ಕುಲಕರ್ಣಿ ಇವರುಗಳು ಕೂಡ ಉಪಸ್ಥಿತರಿದ್ದು ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿನ ಗೊಂದಲವನ್ನು ತಗ್ಗಿಸಿ ಸಂದೇಹ ಪರಿಹರಿಸಲಿದ್ದಾರೆ. ಸಂಶೋಧನೆ ಹಾಗೂ ಅಭಿವೃದ್ಧಿ ವಿಭಾಗದ ಡೀನ್ ಆದ ಡಾ. ಮಹೇಂದ್ರ ದೀಕ್ಷಿತ್ ಕಾರ್ಯಕ್ರಮದ ಸಂಯೋಜಕರಾಗಿದ್ದಾರೆ. ಆಕಾಶವಾಣಿ ಧಾರವಾಡ ಕೇಂದ್ರದ 765kHz ಕಂಪನಾಂಕ ಹಾಗೂ ನ್ಯೂಸ್ ಆನ್ ಏರ್ ಆಪ್ ನಲ್ಲಿ ಪ್ರಸಾರವಾಗಲಿದ್ದು, ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಂದೇಹ ಪರಿಹರಿಸಿಕೊಳ್ಳಲು ಕರೆ ಮಾಡಬೇಕಾದ ದೂರವಾಣಿ ಸಂಖ್ಯೆ 0836–2443414/ 0831–2443415/ 0836–2443416.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal